ಸರ್ಕಾರವು ರಾಜ್ಯದಿಂದ ತಿರುಮಲಕ್ಕೆ ಭೇಟಿ ಕೊಡುವ ಯಾತ್ರಾರ್ಥಿಗಳಿಗೆ ಉತ್ತಮ ಸೌಲಭ್ಯವನ್ನು ಹೆಚ್ಚಿಸಲು ಹಾಗೂ ಸಾಮಾನ್ಯ ಭಕ್ತಾದಿಗಳಿಗೂ ಸೌಲಭ್ಯ ಸಿಗುವಂತೆ ಸಮಗ್ರ ಯೋಜನೆಯಡಿ ವಸತಿ ಸಮುಚ್ಚಯವನ್ನು ನಿರ್ಮಿಸುವ ಬಗ್ಗೆ ಕಾರ್ಯೋನ್ಮುಖಿಯಾಗಿದೆ.

ಬೆಂಗಳೂರು - ಮೈಸೂರು ಹೆದ್ದಾರಿ ಅಭಿವೃದ್ಧಿ

33 (156) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು-ಮೈಸೂರು ಹೆದ್ದಾರಿಯನ್ನು ನಾಲ್ಕು ಪಥವಾಗಿ (four lane) ನಿರ್ಮಾಣ ಮಾಡಿ, ಅಭಿವೃದ್ಧಿಪಡಿಸುವ ಯೋಜನೆಯನ್ನು ಸರ್ಕಾರವು ಕೈಗೊಂಡಿದೆಯೇ;

ಆ) ಕೈಗೊಂಡಿದ್ದಲ್ಲಿ, ಇದರ ವಿವರಗಳೇನು;

ಇ) ಈ ಯೋಜನೆಯು ಅಧಿಕೃತವಾಗಿ ಎಂದಿನಿಂದ ಕಾರ್ಯರೂಪಕ್ಕೆ ಬರುತ್ತದೆ ಹಾಗೂ ಯೋಜನೆಯ ಪ್ರಮುಖ ಅಂಶಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಈ ಯೋಜನೆಯ ಅಡಿಯಲ್ಲಿ ಹಾಲಿ ಬೆಂಗಳೂರು-ಮೈಸೂರು ಎರಡು ಪಥದ ರಸ್ತೆಯನ್ನು 1.20 ಮೀ. ಅಗಲದ ಮೀಡಿಯನ್ ನಿಂದ ವಿಭಾಜಿತವಾದ 7.00 ಮೀ. ಅಗಲದ ಎರಡು ಮಾರ್ಗಗಳ ರಸ್ತೆಯನ್ನಾಗಿ ಪರಿವರ್ತಿಸಲಾಗುವುದು. ರಸ್ತೆಯ ಎರಡು ಬದಿಗಳಲ್ಲಿ 2.50 ಮೀ ಅಗಲದ ಮಣ್ಣಿನ ಬದಿಗಳನ್ನು ಆಳವಡಿಸಲು ಯೋಜಿಸಲಾಗಿದೆ. ಅದಲ್ಲದೆ 76 ತಿರುವುಗಳನ್ನು ಐ.ಆರ್.ಸಿ. ಮಾನದಂಡದ ಪ್ರಕಾರ ಅಭಿವೃದ್ಧಿಪಡಿಸಲಾಗುವುದು. ಬಿಡದಿ ಮತ್ತು ಕೆಂಗಲ್ ಬಳಿ ರೇಲ್ವೆ ಮೇಲ್ಸೇತುವೆ (ಆರ್.ಒ.ಬಿ)ಗಳನ್ನು ನಿರ್ಮಿಸಲಾಗುವುದು.

ಇ) ಯೋಜನೆಯ ಅನುಷ್ಠಾನಕ್ಕಾಗಿ ಭೂಸ್ವಾಧೀನ ಕಾರ್ಯವು ಪ್ರಗತಿಯಲ್ಲಿದೆ. ಭೂ ಸ್ವಾಧೀನದ ನಂತರ ಯೋಜನೆಯ ಅನುಷ್ಠಾನವನ್ನು ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಯ ಪ್ರಮುಖ ಅಂಶಗಳೆಂದರೆ ಸದ್ಯದ ಮತ್ತು ಮುಂದೆ ಹೆಚ್ಚಬಹುದಾದ ವಾಹನ ಸಾಂದ್ರತೆಯನ್ನು ಗಮನಿಸಿ ವಾಹನಗಳ ಸುಗಮ ಸಂಚಾರಕ್ಕಾಗಿ ನಾಲ್ಕು ಪಥದ ರಸ್ತೆಯನ್ನಾಗಿ ನಿರ್ಮಿಸುವುದು.

ಮಂಡ್ಯ ನಗರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ

34 (158) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಅದರ ವಿವರಗಳೇನು?

ಇ) ಪ್ರಸ್ತಾವನೆಯು ಈಗ ಯಾವ ಹಂತದಲ್ಲಿದೆ?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು.